ಅವರು ಕೊಡಗಿಗೆ ಬಂದು ನಿವೃತ್ತಿ ವೇತನ ಅಥವಾ ವಿಶ್ರಾಂತಿ ವೇತನಗಳಿಲ್ಲದೆ ಜೀವಿಸುತ್ತಿದ್ದಾರೆ. ಕೊಡಗಿನ ಘನ ಸರಕಾರದವರಾ ಅವರುಗಳ ಕಷ್ಟವನ್ನು ನೋಡಿ ಆಗಿನ ಸರಕಾರ ಅರಣ್ಯ ಇಲಾಖೆಯಿಂದ ತಲಾ ಒಕ್ಕೆ ರಿಂದ ೧೦೦ ಎಕರೆ ಜಮೀನನ್ನು ೨೧ ವರ್ಷಗಳ ಅವಧಿಗೆ ಏಲಕ್ಕಿ ಕೃಷಿ ಮಾಡಲು ಗೇಣಿ ರೂಪದಲ್ಲಿ ನೀಡಿದ್ದು ಕನಿಷ್ಟ ರೂಪದ ಕಂದಾಯವನ್ನು ವಸೂಲು ಮಾಡುತ್ತಿದ್ದರು. ಅವರು ೩೦ ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ತಮ್ಮ ಸಂಸಾರವನ್ನು ನಡೆಸಿಕೊಂಡು ಬರುತ್ತಿದ್ದರು. ಈಗ ೧೯೮೦ ರಿಂದ ಅವರ ಗೇಣಿ ಅವಧಿ ೨೧ ವರ್ಷ ಮುಗಿದಿದ್ದು ಈಗಾಗಲೇ ಸರಕಾರದ ವಶಕ್ಕೆ ಬಿಡಬೇಕೆಂದು ತೀರ್ಮಾನವಾಗಿರುವುದು ಅವರ ಗಮನಕ್ಕೆ ಬಂದಿರುವುದಿಲ್ಲ. ಅವರುಗಳು ಅಂದರೆ ಸೇನೆಯಲ್ಲಿ ಸೇವೆ ಸಲ್ಲಿಸಿದ ಬಳಿ ಮಂದಿ ಅಂದಾಜು ೪೦೦೦ ಎಕರೆ ಅರಣ್ಯ ಪ್ರದೇಶದಲ್ಲಿ ಏಲಕ್ಕಿ ಕೃಷಿ ಮಾಡಿಕೊಂಡಿರುತ್ತಾರೆ. ಮತ್ತು ಈ ಗೇಣಿ ಮಲೆಗಳನ್ನು ಬಿಟ್ಟು ಜೀವಿಸಲು ಅವರಿಗೆ ಅನ್ಯ ಮಾರ್ಗವಿಲ್ಲದಂತಾಗಿದೆ. ಈ ಬಗ್ಗೆ ಅವರುಗಳು ಸಂಬಂಧಪಟ್ಟ ಇಲಾಖೆಯಲ್ಲಿ ಮನವಿ ಮಾಡಿಕೊಂಡರೂ ಪ್ರಯೋಜನವಾಗಿಲ್ಲ. ಮತ್ತು ಇಲಾಖೆಯ ಅಧಿಕಾರಿಗಳು ಗೇಣಿ ಮಲೆಗಳಿಂದ ಫಸಲು ಕುಯ್ಯುವಲ್ಲಿ ತೊಂದರೆ ಕೊಡುತ್ತಿರುವುದಲ್ಲದೆ ಸರಕಾರಕ್ಕೆ ಪಾವತಿ ಮಾಡುವ ಕಂದಾಯವನ್ನು ಸ್ವೀಕರಿಸುತ್ತಿಲ್ಲ. ಈ ರೀತಿಯ ಇತ್ಯಟ್ಟಿನ ಪರಿಸ್ಥಿತಿಯಲ್ಲಿ ಅವರು ಸಿಲುಕಿದ್ದಾರೆ. ಕಳೆದ ವರ್ಷ ಏಲಕ್ಕಿ ಗೇಣಿ ಮಲೆಗಳನ್ನು ಪುನಃ ಗೇಣಿದಾರರಿಗೆ ೨೧ ವರ್ಷಕ್ಕೆ ಗೇಣಿಗೆ ಕೊಡುತ್ತೇವೆಂದು ಈ ಸದನದಲ್ಲಿ ಆಗಿನ ಅರಣ್ಯ ಮಂತ್ರಿಗಳಾದ ಶ್ರೀ ಜೀವಿಜಯ ಅವರು ಲಿಖಿತ ಮೂಲಕ ಹೇಳಿಕೆ ಕೊಟ್ಟಿದ್ದಾರೆ ಆದರೆ ಈತನಕ ಈ ಮೇಲಿನ ಹೇಳಿಕೆಯನ್ನು ಕಾರ್ಯಗತ ಮಾಡಿರುವುದಿಲ್ಲ. ಆದುದರಿಂದ ಈ ಮಾಜಿ ಸೈನಿಕರ ಸ್ಥಿತಿ ಶೋಚನೀಯವಾಗಿದ್ದು. ಅವರಿಗೆ ಕೂಡಲೇ ಗೇಣಿ ಮಲೆಗಳನ್ನು ಪುನಃ ಕೊಡಬೇಕೆಂದು ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಸಭೆಯ ಗಮನ ಸೆಳೆದಂತಹ ವಿಷಯ ಬಹಳ ಮಹತ್ವವಾದುದು ನಮ್ಮ ಯೋಧರಿಗೆ ಕೊಟ್ಟಂತಹ ಜಮೀನಿನ ಗೇಣಿಯನ್ನು ಮುಂದುವರಿಸುವ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಕೂಡಲೇ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

10 ಸಂಖ್ಯೆ ತಾಲ್ಲೂಕಿನ ನೆಲ್ಲೂರು ಕೆಪ್ಪೂಜೆ ಮುಂತಾದ ಗ್ರಾಮಗಳಲ್ಲಿ ಅರಣ್ಯ ಇಲಾಖೆಯವರು ಸಿ ಅಂಡ್ ಡಿ ಜಮೀನುಗಳಲ್ಲಿ ಗುಂಪ್ಪೆ ಹಾಗೂ ಆವರಣ ಗೋಡೆಗಳನ್ನು ನಿರ್ಮಿಸಿರುವುದು.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸಂಖ್ಯೆ ತಾಲ್ಲೂಕಿನ ನೆಲ್ಲೂರು ಕೆಪ್ಪೂಜೆ ಮುಂತಾದ ಗ್ರಾಮಗಳಲ್ಲಿ ಕಳೆದ ಒಂದೆರಡು ತಿಂಗಳುಗಳಿಂದ ಅರಣ್ಯ ಇಲಾಖೆಯಿಂದ ಸಿ ಅಂಡ್ ಡಿ ಜಮೀನುಗಳನ್ನು ಅಳತೆ ಮಾಡಿ ಪುಕೃತ ಗುಪ್ಪೆ ಹಾಗೂ ಆವರಣ ಗೋಡೆಗಳನ್ನು ರಚಿಸಲು ಗುರುತು ಮಾಡುತ್ತಿರುವುದು ತಿಳಿದು ಬರುತ್ತದೆ. ಈ ಗುಪ್ಪೆ ಆವರಣದ ಕುರಿತು ಅಳತೆ ಮಾಡುವ ಜಮೀನುಗಳಲ್ಲಿ ೧೦-೧೫ ವರ್ಷಗಳಿಂದ ಆಗು ವಾಡಿದ ಬಡ ಕೃಷಿಕರು ಹರಿಜನ ಗಿರಿಜನ ಕಾರ್ಮಿಕರು ಅಡಿಕೆ-ತೆಂಗು, ಭತ್ತದ ಬೆಳೆ ಕೃಷಿಗಳನ್ನು ಮಾಡಿರುತ್ತಾರೆ. ಫಲಗಳು ಬರುತ್ತಿದೆ. ಈ ಸಿ ಮತ್ತು ಡಿ ಜಮೀನು ಕಂದಾಯ ಇಲಾಖೆಯ ರೆವಿನ್ಯೂ ಭೂಮಿಗಳಾಗಿರುತ್ತವೆ. ಈ ಜಮೀನುಗಳನ್ನು ರೈತರು ಆಗು ಮಾಡಿದ್ದರು. ಕೆಲವರಿಗೆ ೧೦-೧೫ ವರ್ಷಗಳ ಹಿಂದೆಯೇ ದರಖಾಸ್ತು ಆದ ಜಮೀನೂ ಇರುತ್ತದೆ, ಮತ್ತು ೧೦-೧೫ ವರ್ಷಗಳಿಂದ ಆಗು ಮಾಡಿ ದರಖಾಸ್ತು ಮಂಜೂರಾತಿಗಾಗಿ ದಂಡನೆ ತೆರಿಗೆ, ತೀರ್ಪು, ಗತತೀರ್ಪು, ಟಿ. ಟಿ. ತೆರಿಗೆ ಕಟ್ಟಿದ ಕೃಷಿಕರ ಜಮೀನುಗಳನ್ನು ಸ್ವಾಧೀನಾನುಭವದಲ್ಲಿದ್ದರೂ ಗುಪ್ಪೆ ಹಾಗೂ ಆವರಣ ಗೋಡೆ ನಿರ್ಮಿಸುವ ಸಲುವಾಗಿ ಅಳತೆ ಕೆಲಸ ಪೂರೈಸಿದ್ದಾರೆ. ಸರಕಾರಕ್ಕೆ ದಂಡನೆ ಗತ ತೀರ್ಪು ಪಾವತಿಸಿ ಸರಕಾರಕ್ಕೆ ಕೆಲವು ವರುಷಗಳಿಂದ ಮನವಿ ನೀಡಿ ಸರಕಾರದಿಂದ ಖಾದ್ರಿ ಮಂಜೂರಾತಿಯಾಗಿ ಜಾತಕ ಪಕ್ಷಿಯಂತೆ ಸರಕಾರದ ಮುಂದಿನ ಮಂಜೂರಾತಿ ಆದೇಶವನ್ನು ಕಾದು ಕುಳಿತಿರುವ ಬಡ ಕೃಷಿಕರು ತುಂಬಾ ಕಂಗಾಲಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಈ ಸಿ ಮತ್ತು ಡಿ. ಕಂದಾಯ ಇಲಾಖೆಯ ಜಮೀನುಗಳಲ್ಲಿ ಎಷ್ಟೋ ಬಡಜನರು ಕೃಷಿ ಕಾರ್ಮಿಕರು, ಹರಿಜನ ಗಿರಿಜನರು ಈ ಜಮೀನುಗಳಲ್ಲಿ ದರಖಾಸ್ತು ಮಂಜೂರಾತಿಯಾದವರೂ ಆಗಂ

ಇದ್ದು ಇನ್ನೂ ಮಂಜೂರಾತಿಗಾಗಿ ಸರಕಾರದ ಆದೇಶವನ್ನು ಕಾಯುತ್ತಿರುವವರು ಸಿ ಮತ್ತು ಡಿ ಜಮೀನು ಕಂದಾಯ ಇಲಾಖೆಯ ರೆವಿನ್ಯೂ ಜಮೀನಾಗಿತ್ತು. ಸುಮಾರು ೧೯೬೪ನೇ ಇಸವಿಯಲ್ಲಿ ಏನೋ ಸಿ ಮತ್ತು ಡಿ ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಕೊಡುವ ಪ್ರಸ್ತಾವನೆ ಹಾಕಲಾಗಿದ್ದರೂ ೧೯೬೪ರಲ್ಲಿ ಈ ಜಮೀನನ್ನು ಯಾವುದೇ ಅಳತೆ ಮತ್ತು ಪರಿಶೀಲನೆಯನ್ನು ಕೈಗೊಳ್ಳದೆ ಈ ಪ್ರಸ್ತಾವನೆಗಿಂತ ಮೊದಲು ದರಖಾಸ್ತು ಮಂಜೂರಾದ ಮತ್ತು ಆಗ ಆಗಲೆಯಲ್ಲಿದ್ದ ಬಡ ಕೃಷಿಕರ ಜಮೀನನ್ನು ಇದ್ದಕ್ಕಿದ್ದ ಹಾಗೆ ಅರಣ್ಯ ಇಲಾಖೆಗೆ ಬಿಟ್ಟು ಕೊಡುವ ಕ್ರಮವನ್ನು ಮಾಡಿದುದರಿಂದ ಈಗ ಬಡ ಸಿ ಮತ್ತು ಡಿ ಜಮೀನುಗಳ ಅಗೆದಾರರು ಅನ್ಯಾಯಕ್ಕೊಳಗಾಗಿದ್ದಾರೆ. ಇದರಲ್ಲಿ ಕೆಲವು ಶ್ರೀಮಂತ ವರ್ಗದ ದರಖಾಸ್ತು ಮಂಜೂರಾತಿದಾರರ ಮತ್ತು ಆಗುದಾರರ ಜಮೀನಿನ ಗೊಡವಗೆ ಅರಣ್ಯ ಇಲಾಖೆ ಕ್ರಮ ಕೈಗೊಳ್ಳುವ, ಅಥವಾ ಸ್ವಾಧೀನತೆ ಮಾಡುವ ಗೊಜವಗೆ ಹೋದದ್ದಿರುವುದಿಲ್ಲ. ಉದಾಹರಣೆಗೆ ಸುಳ್ಯ ತಾಲ್ಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮಗಳಲ್ಲಿ ಕಳೆದ ಎರಡು ತಿಂಗಳುಗಳಿಂದ ಈ ಬಗ್ಗೆ ಜಾಯಮಾನ ನಡೆದಿದೆ. ಆದುದರಿಂದ ಈ ಹಿಂದೆ ಕಂದಾಯ ಇಲಾಖೆಯ ಜಮೀನುಗಳಲ್ಲಿ ಆಗು ಮಾಡಿದ ದರಖಾಸ್ತು ಮಂಜೂರಾದ ಮತ್ತು ಬಗರ್ ಮಿತಿಯ ಜಮೀನುಗಳನ್ನು ಆಗು ಮಾಡಿದ ಎಲ್ಲ ಹರಿಜನ ಗಿರಿಜನ ಕೃಷಿ ಕಾರ್ಮಿಕರಿಗೆ ಆಗುವ ತೊಂದರೆಯನ್ನು ತಪ್ಪಿಸಿ ಅರಣ್ಯ ಇಲಾಖೆ ಅಳತೆಗೆ ಕೈಕೊಂಡ ಕ್ರಮವನ್ನು ಕೂಡಲೇ ತಡೆಗಟ್ಟಿ ಆಗುದಾರರ ಖಾಯಂ ಮಂಜೂರಾತಿಗೆ ತೀವ್ರ ಕ್ರಮ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ನಾಳೆ ತಮಗೆ ಮಾಹಿತಿಯನ್ನು ತರಿಸಿಕೊಡುತ್ತೇನೆ.

೧೧ ಮಲೆನಾಡು ಪ್ರದೇಶಗಳಲ್ಲಿ ಸಿ ಮತ್ತು ಡಿ ಭೂಮಿಯನ್ನು ಗುರುತಿಸುವಾಗ ಸರಿಯಾದ ಮಾಹಿತಿ ಸಂಗ್ರಹಣೆ ಮಾಡದೆ ಇರುವುದು.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಮಲೆನಾಡು ಪ್ರದೇಶಗಳಲ್ಲಿ ಬಹಳ ವರ್ಷಗಳಷ್ಟು ಹಿಂದೆಯೇ ಸಿ ಮತ್ತು ಡಿ ಭೂಮಿಯನ್ನು ಗುರುತಿಸುವಾಗ ತರಾತುರಿ ಹಾಗೂ ಸರಿಯಾದ ಮಾಹಿತಿ ಸಂಗ್ರಹಣೆ ನಡೆಯದೆ ಕೃಷಿ ಯೋಗ್ಯ ಭೂಮಿಗಳನ್ನು ಹಾಗೂ ರೈತರು ಮನೆಕಟ್ಟಿಕೊಂಡು ವಾಸವಾಗಿರುವ ಸಾಗುವಳಿ ಮಾಡುತ್ತಿರುವ ಭೂಮಿಯೂ ಸಹ ಈ ಪಟ್ಟಿಯಲ್ಲಿ ಸೇರಿದ್ದು ಅರಣ್ಯ ಇಲಾಖೆ ಎಂ. ಪಿ ಎಂ. ಮತ್ತು ಕೆ ಪಿ ಎಲ್. ಇಲಾಖೆಯವರು ಪಟ್ಟಿಯಲ್ಲಿರುವ ಪ್ರದೇಶಗಳಲ್ಲಿ ಅರಣ್ಯ ಬೆಳೆಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ, ಈ ಇಲಾಖೆಯವರಿಗೂ ರೈತರಿಗೂ ಸರಿಯಾದ ಮಾಹಿತಿ ಸಂಗ್ರಹಣೆ ಇಲ್ಲದೆ ದಿನನಿತ್ಯ ಒಂದಲ್ಲ ಒಂದು ರೀತಿಯ ಸಂಘರ್ಷ ನಡೆಯುತ್ತಿರುವುದರಿಂದ ಗ್ರಾಮಿಣ ಪ್ರದೇಶಗಳಲ್ಲಿ ಅಶಾಂತಿ ತುಂಬಿದೆ. ರೈತರು, ಮನೆಕಟ್ಟಿಕೊಂಡು ವಾಸ ಮಾಡುತ್ತಿರುವ ಜನರ ಹಿತದೃಷ್ಟಿಯಿಂದ ಸಿ ಮತ್ತು ಡಿ ಪ್ರದೇಶಗಳ ಗುರುತಿಸುವಿಕೆಯಲ್ಲಿ ಆಗಿರುವ ಅಸಮರ್ಪಕತೆಯನ್ನು ಸರಿಪಡಿಸಲು ಹೊಸದಾಗಿ ಕೃಷಿಯೇತರ ಭೂಮಿಯನ್ನು ಗುರುತಿಸುವ ಬಗ್ಗೆ ಸರಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕಾಗಿ ಈ ಮೂಲಕ ಸಚಿವರನ್ನು ಕೋರುತ್ತೇನೆ.

ಶ್ರೀ ಎಸ್ ಆರ್ ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಅನೇಕಸಲ ಈ ಸಭೆಯಲ್ಲಿ ಮಾನ್ಯ ಸದಸ್ಯರು ಎತ್ತಿದ್ದಾರೆ. ಇದರ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ೧೯೮೧-೮೨ರಲ್ಲಿ ಸುಮಾರು ೨೫ ಲಕ್ಷ ಎಕರೆ ಸಿ ಅಂಡ್ ಡಿ ಭೂಮಿಯನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಿದ್ದೇವೆ ಅರಣ್ಯ ಇಲಾಖೆಯವರು ಕಾರ್ಯಕ್ರಮವನ್ನು ಮುಂದುವರಿಸಿದ್ದಾರೆ. ಇಲ್ಲಿ ಪ್ರಾಮುಖ್ಯವಾದಂಥ ಕಾನೂನು ಪ್ರಶ್ನೆ ಇದೆ ಮತ್ತು ವ್ಯವಹಾರಿಕವಾದಂಥ ತೊಡಕು ಇದೆ. ಒಂದು ಸಾರಿ ಅರಣ್ಯ ಇಲಾಖೆಗೆ ಹೋದ ಭೂಮಿಯನ್ನು ಮತ್ತೆ ವಾಪಸ್ಸು ತೆಗೆದುಕೊಳ್ಳಲಿಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಇಲ್ಲ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಮನೆ ಕಟ್ಟುವ ವಿಚಾರ ಇತ್ತೀಚೆಗೆ ಸರ್ಕಾರದ ಗಮನಕ್ಕೆ ಬಂದಿದೆ. ಈ ವಿಚಾರದ ಬಗ್ಗೆ ಈಗಾಗಲೇ ಸೆಲೆಕ್ಟ್ ಕಮಿಟಿ ಮುಂದೆ ವಿಚಾರ ಮಾಡುತ್ತಿದ್ದೇವೆ. ಇದರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ವಿಚಾರಮಾಡಿ ಸೂಕ್ತ ನಿರ್ಣಯವನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆ.